25.	ಗಟ್ಟಪ್ರಭ (ಧಪದಲ್)	2
26.	ಕೊನ್ನೂರ್ ಟಿಎಂಸಿ	1
27.	ಗೋಕಾಕ್ ರೋಡ್	1
28.	ಮಾಣಿಕ್‌ವಾದಿ	1
29.	ಮರ್ಡಿಮಟ	1
30.	ಅಕ್ಕತಂಗರಾಳ	1
31.	ದುರ್ಗನತ್	1
32.	ದುಮರಲಿನಹಟ್ಟಿ	1
33.	ಕುಂದರಗಿ	1
34.	ಅಂಕಲಗಿ	1
35.	ಮಡವಾಳ್	1
36.	ಹಿರ್ನಟ್ಟಿ	1
37.	ಖಿನಗಾನ್	1
38.	ನಾಬಪುರ	1

ಗೋಕಾಕ್ ತಾಲ್ಲೂಕಿನ ಸುಣಧೋಳಿ ಬ್ಯಾರೇಜ್ ಕಾಮಗಾರಿ.

839 - ಶ್ರೀ ವಿ. ಎಸ್. ಕೌಜಲಗಿ (ಅರೆಬಾವಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗೋಕಾಕ ತಾಲ್ಲೂಕಿನ ಸುಂಧೋಳಿ ಬ್ಯಾರೇಜ್ ದುರಸ್ಥಿ ಕಾಮಗಾರಿಗೆ ಈಗಾಗಲೇ ಹಣ ಬಿಡುಗಡೆಯಾಗಿದ್ದರೂ, ಕಾಮಗಾರಿಯನ್ನು ಇಲ್ಲಿಯವರೆಗೆ ಪ್ರಾರಂಭಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಏನು ಕ್ರಮಕೈಗೊಳ್ಳಲಾಗಿದೆ

ಇ) ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಎಷ್ಟು ಕಾಲಾವಕಾಶ ಬೇಕಾಗುವುದು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು):

ಅ) ಬಂದಿದೆ. 94-95ನೇ ಸಾಲಿನಲ್ಲಿ ಕೇವಲ 2 ಲಕ್ಷ ರೂ.ಗಳ ಅನುದಾನ ಹೊಂದಿದ್ದು ಶೇ. 30 ರಷ್ಟು ಅನುದಾನ ಲಭ್ಯವಿರುವ ಕಾರಣ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿರುವುದಿಲ್ಲ.

ಆ) ಯೋಜನೆಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿ ಲಭ್ಯವಾಗುವ ಅನುದಾನದ ಅನುಗುಣವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳ ಲಾಗುವುದು.

ಇ) ಯೋಜನೆಯ ಕಾಮಗಾರಿಗೆ ಲಭ್ಯವಾಗುವ ಅನುದಾನ ಅನುಗುಣವಾಗಿ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ನೀಡಿ, ಗುತ್ತಿಗೆ ದಾರರನ್ನು ಗುರುತಿಸಿದ ನಂತರ ಮಳೆಗಾಲ ಹೊರತುಪಡಿಸಿ 9 ತಿಂಗಳು ಬೇಕಾಗಬಹುದಾಗಿದೆ.